ವಿ. ಹಮೀದ್, ವಿಟ್ಲ
*ಲವರ್‍ಸ್ ಕಣ್ಣಲ್ಲೇ ಮಾತಾಡ್ತಾರೆ ಎನ್ನುತ್ತಾರಲ್ಲಾ, ಹೇಗೆ ಸಾರ್?*



ಇಡೀ ಕಣ್ಣೂ ಬೇಡ; ಕುಡಿನೋಟ ಬೀರಿ, ರೆಪ್ಪೆಯನ್ನು ಅಷ್ಟಷ್ಟೇ ಅಲುಗಿಸಿದರೆ ಹುಡುಗ ಚಿತ್ತೋ ಚಿತ್ತು!

ಆರ್. ಮಧುಸೂದನ್, ಹಾಸನ
*ಪುಣ್ಯಕೋಟಿ ಹಸುವಿನ ಹಾಲನ್ನು ಕುಡಿದರೂ ಮನುಷ್ಯ ಸುಳ್ಳು ಹೇಳುವುದೇಕೆ?*
ನಿಜ ಕೇಳಿದ ತಕ್ಷಣ ನೆಗೆದುಬಿದ್ದು ಸಾಯುವ ಚಂಡವ್ಯಾಘ್ರ ಸಿಗದಿರುವ ಏಕೈಕ ಕಾರಣ.

ಎಚ್.ಆರ್. ದೇಸಾಯಿ, ರಾಯಚೂರು
*ಬಿಎಸ್‌ವೈ ಅವರನ್ನು ಹಾಕಿಕೊಂಡು ಅರಳಿದ ತಾವರೆ ಮುದುಡಿತು ಎಂಬ ಸಿನಿಮಾ ಮಾಡ್ತಾರಂತೆ, ನಡೆಯಬಹುದೆ?*
ಕೆಜೆಪಿಯವರಾದ್ದರಿಂದ ಕರಟ ಜನರ ಪಾಲಿಗೆ ಎಂದು ಹೆಸರಿಟ್ಟರೆ ಓಡಿದರೂ ಓಡಬಹುದು!

ಡ್ರೈರಿ ಬಿ. ವಿಶ್ವನಾಥ್, ಬೆಂಗಳೂರು
*ಶಯನಕುಮಾರನ ಕೆಲಸವೇನು?*
ಶಯನದ ಅಥವಾ ಮಾರನ ಜಪ!

ಅನಂತಪದ್ಮನಾಭ ಹೆಚ್.ಎಂ. ಮೈಸೂರು
*ಮಾಘ ಓದಿ ಮಗ ಕೆಟ್ಟ, ಗೀತೆ ಓದಿ ಅಳಿಯ ಕೆಟ್ಟ. ನೀವು ಏನನ್ನು ಓದಿದ್ದೀರಿ?*
ಮಾಘದಲ್ಲಿ ಕೆಟ್ಟ ಗೀತೆಯನ್ನು ಓದಿದ್ದೇನೆ.

ಎನ್.ವಸಂತಾ, ಕತ್ರಗುಪ್ಪ
*ಯಾರಿಗೂ ತಲೆಬಾಗದ ರಾಜಕಾರಣಿ ಕ್ಷೌರಿಕನಿಗೆ ಮಾತ್ರ ತಲೆ ಬಗ್ಗಿಸಬೇಕಲ್ಲವೆ?*



ತಲೆ ಬಾಗದ ರಾಜಕಾರಣಿ ಇಲ್ಲವೇ ಇಲ್ಲ; ಹಣಭರಿತ ಸೂಟ್‌ಕೇಸ್ ಮುಂದಿಡಿ, ತಲೆಯೇನು, ಇಡೀ ಮೈಯನ್ನೇ ಬಾಗಿಸುತ್ತಾನೆ.

ಎಸ್.ಶ್ರೀಧರ್, ಬೆಂಗಳೂರು
*ಕೆಲವರು ಬದುಕಿರುವಾಗಲೇ ಸತ್ತವರಂತೆ ಏಕೆ ಬದುಕುತ್ತಾರೆ?*
ಆರಾಮವಾಗಿರಬಹುದಲ್ಲ! ಯಾರೋ ಬಾಯಿಗೆ ಅಕ್ಕಿಕಾಳು ಹಾಕ್ತಾರೆ, ಯಾರೋ ಸ್ನಾನ ಮಾಡಿಸ್ತಾರೆ, ಯಾರೋ ಹೊತ್ಕೊಂಡು ಹೋಗಿ ಮಲಗಿಸ್ತಾರೆ.....!

ಪಿ.ಎನ್.ಶ್ರೀವತ್ಸ, ಬೆಂಗಳೂರು
*ಅಕ್ಷತೆ ಹಾಕುವುದಕ್ಕೂ, ಅಕ್ಕಿ ಕಾಳು ಹಾಕುವುದಕ್ಕೂ ಏನಾದರೂ ವ್ಯತ್ಯಾಸವಿದೆಯೆ?*
ತಲೆ ಬಾಗಿದಾಗ ಅಕ್ಷತೆ, ತಲೆ ಸಾಗಿದಾಗ ಅಕ್ಕಿ ಕಾಳು!

ನವಿರವಿ, ಬಾಳೆಹೊನ್ನೂರು
*ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳಂತೆ. ನಿಮ್ಮ ಹಿಂದೆ, ಮುಂದೆ, ಅಕ್ಕ, ಪಕ್ಕ, ಯಾರಾದರೂ.....?*
ಹಿಂದೆ ಗುರು, ಮುಂದೆ ಗುರಿ; ಅಕ್ಕ ಪಕ್ಕ ಸಾಹಿತಿಗಳ ಟ್ರಾಫಿಕ್ ಜ್ಯಾಂ!

ಕುಮಾರ ಚಲವಾದಿ, ಹೊಳೆನರಸಿಪುರ
*ಟೀಚರ್, ನರ್ಸ್, ಕಂಡಕ್ಟರ್ ಇವರಲ್ಲಿ ಯಾರನ್ನು ಮದುವೆಯಾದರೆ ಚೆನ್ನ?*
ಸದ್ಯ! ಕುಮಾರ ಅಂತ ಹೆಸರಿರೋದ್ರಿಂದ ಮೂವರನ್ನೂ ಮದುವೆಯಾದರೆ ಹೇಗೆ ಅಂತ ಕೇಳ್ತೀರೇನೋಂತ ಭಯವಾಗಿತ್ತು, ಸ್ವಾಮಿ!

ಜಿ. ವಿಶ್ವನಾಥ, ಗೊಂಡೇದಹಳ್ಳಿ
*ಮುಂಬರುವ ಚುನಾವಣೆಗಳಲ್ಲಿ ಸ್ಪರ್ಧಿಸಲಿರುವ ಅಭ್ಯರ್ಥಿಗಳು ಭ್ರಷ್ಟಾಚಾರಿ, ಅತ್ಯಾಚಾರಿಯಾಗಿದ್ದರೆ ಯಾರಿಗೆ ಮತ ನೀಡುವುದು?*
ಅತ್ಯಾಚಾರಿಗೇ ನೀಡಿ– ಕೆಡಿಸಿದವಳನ್ನು ಕಟ್ಟಿಕೊಂಡರೆ ಮಾತ್ರ!

ಜಾಕೋಬ್ ಡಿಸೋಜ, ಕುರುವಳ್ಳಿ
*ಕಲಿಯುವುದಕ್ಕೆ ಕೊನೆಯೇ ಇಲ್ಲ ಅಂತಾರಲ್ಲಾ...?*
ಅದಕ್ಕೇ ಇದನ್ನು ಕಲಿ ಯುಗ ಎನ್ನುವುದು!

ಪಿ.ಜೆ. ರಾಘವೇಂದ್ರ, ಮೈಸೂರು
*ಸಿಎಂ ಕುರ್ಚಿಗೂ ವಿಮೆ ಮಾಡಿಸುವಂತಿದ್ರೆ ಹೇಗಿರುತ್ತಿತ್ತು ರಾಮ್‌ಜೀ...?*
ಭಾಜಪದ ಸಿಎಂಗಳಿಗೆಂದೇ ಗ್ರೂಪ್ ಇನ್ಶೂರೆನ್ಸ್ ಮಾಡಿಸಬೇಕಾಗುತ್ತಿತ್ತು!

ಎಸ್.ವಿ. ಶ್ರೀನಿವಾಸ, ಚಿಕ್ಕಮಗಳೂರು
*ಶಕ್ತಿ, ಮುಕ್ತಿ, ಯುಕ್ತಿ ಈ ಮೂರರ ಬಗ್ಗೆ ತಿಳಿಸಿ?*
ದೇಹವನ್ನು ನಂಬಿದವನಿಗೆ ಶಕ್ತಿ, ದೇವನನ್ನು ನಂಬಿದವನಿಗೆ ಮುಕ್ತಿ, ಧ್ಯೇಯವನ್ನು ನಂಬಿದವನಿಗೆ ಯುಕ್ತಿ ಸಮಂಜಸ.

## ಬಹುಮಾನಿತ ಪ್ರಶ್ನೆ

ಎಂ.ಎಸ್.ಧರ್ಮೇಂದ್ರ. ಜಿಟಿಆರ್‌ಇ ಕ್ಯಾಂಪಸ್
*ಹುಡುಗರ ಕೈ ನರ್ಸ್ ಹಿಡಿದರೆ ಚೆಕ್‌ಅಪ್, ನರ್ಸ್ ಕೈ ಹುಡುಗರು ಹಿಡಿದರೆ ಪಿಕ್‌ಅಪ್ ಅಂತ ವ್ಯಾಖ್ಯಾನಿಸುತ್ತಾರೆ. ನಿಜಾನಾ?*
ಕೊಂಚ ಇರಿ, ನರ್ಸ್ ಜಯಲಕ್ಷ್ಮಿ, ರೇಣುಕಾಚಾರ್ಯ ಇಬ್ಬರನ್ನೂ ಕೇಳಿ ಹೇಳಿಬಿಡುತ್ತೇನೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ದ್ರೌಪದಿ ಮೈ ತುಂಬಾ ಸೀರೆ ಧರಿಸಿದ್ದರೂ ಏಕೆ ಮಾನಭಂಗಕ್ಕೆ ಒಳಗಾದಳು?*
ಪಂಚ ಪತಿಯರ ಬಲವೂ ಧರ್ಮದ ಮೊಳೆಗೆ ಸಿಕ್ಕಿ ಪಂಕ್ಚರ್ ಆದದ್ದರಿಂದ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಮಂತ್ರಿಗಳು ನಿಜ ಹೇಳುವುದು ಯಾವಾಗ?*
ಸೂರ್ಯ ತಣ್ಣಗಾದಾಗ, ಚಂದ್ರ ಬಿಸಿಯಾದಾಗ, ಇಡೀ ಸಮುದ್ರದ ನೀರು ಸಿಹಿಯಾದಾಗ...!

ರಾಜೇಂದ್ರಕುಮಾರ್, ದೊಡ್ಡಬಳ್ಳಾಪುರ
*ಸೀರೆಗಳ ಅಲರ್ಜಿ ಇರುವ ನೀರೆಯರನ್ನೇ ಸೀರೆ ಅಂಗಡಿ ಉದ್ಘಾಟನೆಗೆ ಕರೆಯುವ ಉದ್ದೇಶ?*




ಸೀರೆ ಪ್ರಿಯರನ್ನು ಕರೆದರೆ ಚೆನ್ನಾಗಿರುವ, ದುಬಾರಿ ಬೆಲೆಯ ಸೀರೆಯನ್ನು ಗಿಫ್ಟ್ ಆಗಿ ಕೊಡಿ ಎಂದು ಕೇಳಿಬಿಟ್ಟಾರೆಂಬ ಭಯ!

ಕುಬೇರಪ್ಪ ಎಂ. ವಿಭೂತಿ, ಹರಿಹರ
*ಕಲಿಯುಗದಲ್ಲಿ ಧರ್ಮ ಎಷ್ಟು ಕಾಲುಗಳಿಂದ ನಡೆಯುತ್ತಿದೆ?*
ಅದು ನಡೆಯುತ್ತಿಲ್ಲ, ಅಧರ್ಮದ ಎಂಟು ಕಾಲುಗಳು, ನಾಲ್ಕು ಭುಜಗಳು ಅದನ್ನು ಹೊತ್ತಿವೆ.

ಎಂ.ಜೆ.ಆರ್. ಶೇಖರ್, ದೊಡ್ಡಬಳ್ಳಾಪುರ
*ಯಡಿಯೂರಪ್ಪ ಇದ್ದಕ್ಕಿದ್ದಂತೆ ಪ್ರಬುದ್ಧರಾದಂತೆ ಕಾಣುತ್ತಾರೆ...?*
ಓಹ್! ನಿಮಗೆ ಕನ್ನಡಕ ಬದಲಾವಣೆಯ ಕಾಲ ಬಂದಿದೆ ಸ್ವಾಮಿ.

■ ರಾಮ್